Ro KR.N - 14

ಜೈ ಗೋಮಾತಾ Jai Gomata

ಫೆಬ್ರವರಿ 1975 February

ಗೋರಕ್ಷಣಾ, ಅಹಿಂಸಾ
ಪ್ರಚಾರ ಪತ್ರಿಕೆ
ಇದಕ್ಕೆ ಲೇಖನ ಧನಸೆರವು ನೀಡುವವರಿಗೆ
ಪ್ರಚಾರಕರಿಗೆ ವಂದನೆಗಳು
ತಿನೇಕ ಪ್ರತಿಗಳು ಉಚಿತವಾಗಿ
ಹಂಚಲ್ಪಾಗುತ್ತಿದೆ
ವಾರ್ಷಿಕ ಚಂದಾ ಅಂಚೆ ಸೂಲ್ಕ ರೂ. 1
೧ ಪ್ರತಿ ಬೇಕಾದವರಿಗೆ 80 ಪೈಸೆ
ದೇಶಾದ್ಯಂತ ಗೋವಧೆ ಕೂಡಲೆ ನಿಲ್ಲಲಿ

ಗೋರಕ್ಷಣಿ
GORAKSHANA

Silver Jubilee Year
ಬೆಳ್ಳಿಹಬ್ಬದವರ್ಷ

Please help in every way This Humanitarian PropagandaPaper Many Papers Distributed Free

Office– 1067 Chamarajapuram. Mysore 4

ವರ್ಷ 25 th Year

ಸಂಪಾದಕರು : ಧರ್ಮಪ್ರಚಾರಾನುರತ ಎಂ. ಎಸ್. ಕೃಷ್ಣರಾವ್

ಬಿಡಿ ಪ್ರತಿ 5 ಪೈಸೆ

Cow- Slaughte should be banned Immediately

ಶುಭ ಸಂಕೇತ – ದಾರಿ ದೀಪ

ಜನವರಿ 22, 23 ರಂದು ತಿರುಪತಿಯಲ್ಲಿ ಆಂಧ್ರಪ್ರದೇಶದ ವಿಶ್ವ ಹಿಂದೂ ಪರಿಷತ್ತಿನವರು ಹಿಂದೂ ಧರ್ಮ ಸಮ್ಮೇಳನವನ್ನು ನಡೆಸಿದರು ; ಅಲ್ಲಿ ಗೋಹತ್ಯೆ ಪ್ರತಿಬಂಧಿಸಬೇಕೆಂಬ ತೀರ್ಮಾನವನ್ನು ತರಲಾಯಿತು ; ಸಮ್ಮೇಳನದವರು ಏರ್ಪಡಿಸಿದ್ದ ಧಾರ್ಮಿಕ ಪ್ರದರ್ಶನವನ್ನು ಉದ್ಘಾಟಿಸುತ್ತಾ, ಹಿಂದೂ ವಿಶ್ವಪರಿಷತ್ತಿನ ಮೂಲಕ ನಡೆಸಲಾಗುವ ಎಲ್ಲಾ ಮತೀಯ ಪ್ರಚಾರ ಚಟುವಟಿಕೆಗಳಿಗೆ ತಿರುಪತಿ–ತಿರುಮಲೆ ದೇವಸ್ಥಾನವು ಆರ್ಥಿಕ ಬೆಂಬಲವನ್ನು ನೀಡುತ್ತದೆಂದು ಶ್ರೀ ಅಣ್ಣಾರಾಯರು ತಿಳಿಸಿದ್ದರು.

ವಿಶ್ವ ಹಿಂದೂ ಪರಿಷತ್ತಿನವರ ನಡೆಸುತ್ತಿರುವ ಮತೀಯ ಚಟುವಟಿಕೆಗಳಲ್ಲಿ ಗೋರಕ್ಷಣೆಯೂ ಒಂದು ಶಮನಕ್ಕೆ ತಡೆಗಾಗಿ ವಿಶ್ವ ಹಿಂದೂ ಪರಿಷತ್ತು ಪ್ರಯತ್ನಿಸುತ್ತಾ ಇದೆ ; ಅಂದರೆ ಗೋಸಂತಾನಕ್ಕೆ ಸಂಕಟ ಬಂದಾಗ ವೆಂಕಟರಮಣನು ಕಾಪಾಡುತ್ತಾನಂತೆ – ಗೋಪಾಲಕೃಷ್ಣ, ಗೋವರ್ಧನ ಗೋವಿಂದನು. ತಿರುಪತಿಯ ವೆಂಕಟೇಶ್ವರನ ಕೃಪಾದೃಷ್ಟಿಯನ್ನು ಹಿಂದೂ ವಿಶ್ವಪರಿಷತ್ತಿನವರು ಆಕಳುಗಳತ್ತ ಆಕರ್ಷಿಸಿಕೊಂಡಿರುವಂತಿದೆ ಕೊಲೆಗಡುಕರಿಂದ ಗೋವನ್ನು ಉಳಿಸದೆ ಸಾಲದು ; ಅವುಗಳ ರಕ್ಷಣೆಯೂ ಆಗಬೇಕು ; ತಿರುಪತಿ ಮಲೆಯು ಮೇಲೆ ವಿಶಾಲ ಸ್ಥಳವಿದೆ ; ದನಕರುಗಳು ಪುನಬಂದಂತೆ ಮೇದು ಬರಬಹುದು ; ಅವುಗಳ ಪಾಲನೆಯುತ್ತ ಗಮನ ಹರಿಸಬೇಕು ; ಗೋಶಾಲೆಯನ್ನು ವಿಸ್ತರಿಸಲು ಅದು ಅತ್ಯುತ್ತಮ ಸ್ಥಳವಿದೆ ಗೋವಿಂದನ ಬಳಿ ಗೋ ಮಾತೆ ಇರಬೇಕು. ವಿಶ್ವ ಹಿಂದೂ ಪರಿಷತ್ತು ಈಗ ಈ ಧಾರ್ಮಿಕ ಚಟುವಟಿಕೆಯುತ್ತ ಪೂರ್ಣ ಲಕ್ಷ್ಯವನ್ನೀಯಬಹುದು

ಬತ್ತಿದ ದನಗಳನ್ನು ಪುಡಿಗಾಸಿನ ಆಶೆಯಿಂದ ಗೋಹಂತಕರಿಗೆ ಮಾರಲಾಗುತ್ತಿದೆ. ಅನ್ಯಾನ್ಯ ಕಡೆಗಳಿಗಿಂದಲೂ ನಷ್ಟವೇ ಇಲ್ಲವೆಂದ ಆರ್ಥಿಕ ತಜ್ಞರು ಅಭಿಪ್ರಾಯಪಟ್ಟರೂ ಆರ್ಥಿಕ ಮುಗ್ಗಟ್ಟಿನ ನೆಪದಿಯಿಂದಾಗಿ ಕಸಾಯಖಾನೆಗೆ ದನಕರುಗಳನ್ನು ಒದಗಿಸುವುದು ಇಂದೂ ತಪ್ಪಿಲ್ಲ. ಈ ಪವಿತ್ರ ಕ್ಷೇತ್ರದಲ್ಲಿ ಭಾರಿ ಯಾಂತ್ರಿಕ ಕಸಾಯಿಖಾನೆಯನ್ನು ತೆರೆಯಬೇಕೆಂದು "ದನಕರು ಚಿಪ್ಪೆ" ಇಟ್ಟುಕೊಂಡು ಅಧಿಕಾರದ ಅಂಕುಶವನ್ನು ಹಿಡಿದುಕೊಂಡಿರುವವರು ಯೋಚಿಸುತ್ತಿರುವಾಗ, ಗೋಭಕ್ತರಿಗೆ ಒಂದು ದಾರಿ ದೀಪ ಕಂಡುಬರುತ್ತಿದೆ. ಅಂತಹ ಪಾಪದ ದನಕರುಗಳಿಗಾಗಿ ಎಲ್ಲೂ ಒಂದು ಉತ್ತಮ ಗೋಶಾಲೆಯನ್ನು ವಿಶ್ವ ಹಿಂದೂ ಪರಿಷತ್ತಿನವರು ಆರಂಭಿಸಿದರೆ, ತಿರುಪತಿ ವೆಂಕಟರಮಣನ ದಯಾದೃಷ್ಟಿ ಅಣ್ಣಾರಾಯರು ಹೇಳಿರುವಂತೆ ಹರಿದಲ್ಲಿ ಗೋಸಂರಕ್ಷಣೆಯ ದೃಷ್ಟಿಯಿಂದಲೂ, ಕೆಲಸಕಾಗಿ ಅಲೆಯುತ್ತಿರುವರಿಗೆ ಪುಣ್ಯಕಾರ್ಯವೇ ಸಿಗುವಂತೆ ಮಾಡುವ ದೃಷ್ಟಿಯಿಂದಲೂ ಒಳ್ಳೆಯದಾದೀತು.

ತಿರುಪತಿಯಲ್ಲಿ ಹೊಡಮೂಡಿಬಂದಿರುವ ಈ ಶುಭ ಸಂಕೇತ ಇತರ ರಾಜ್ಯಗಳವರಿಗೂ ದಾರಿದೀಪವಿದೆ ಅದ್ಯಾವ ರಾಜ್ಯದಲ್ಲಿರುವ ವಿಶ್ವ ಹಿಂದೂ ಪರಿಷತ್ತಿನ ಶಾಖೆಯವರು ಈ ಕಾರ್ಯಕ್ಕೆ ಮುಂದೆಬಂದರೆ ಅಲ್ಲಲ್ಲಿನ ದೇವಸ್ಥಾನಗಳು ಧನಸಹಾಯ ಮಾಡಿದರೆ ....ರೆ....ರೆ....ಕೇವಲ ಆದರೆ–ಹೋದರೆಯ ವಿಷಯ ಇದಲ್ಲ ; ನಡೆಯಬಹುದಾದ ವಿಷಯ ಇದು ; ಇದು ಸಕಲ ದೃಷ್ಟಿಗಳಿಂದಲೂ ರಾಷ್ಟ್ರ ಕಲ್ಯಾಣದ ಶುಭ ಸಂಕೇತವಿದೆ ; ಸರ್ವ ಸಂಪತ್ತಿಗಳಿಗೂ ದಾರಿದೀಪವಿದೆ.

— ಶಿವಶಂಕರ

"ಗೋರಕ್ಷಣ"ದ ಬೆಳ್ಳಿ ಹಬ್ಬಕ್ಕೆ
ನೆರವು ಕೃಪೆ ನೀಡಿರುವವರು

ಶ್ರೀ ಶ್ರೀ ಶೃಂಗೇರಿ ಜಗದ್ಗುರುಗಳವರು
ಶ್ರೀ ಶ್ರೀ ದ್ವಾರಕಾ ಜಗದ್ಗುರುಗಳು
ಶ್ರೀ ಶ್ರವಣಬೆಳಗೊಳದ ಜೈನ ಮಠದ ಮಹಾಸ್ವಾಮಿಗಳವರು
ಚಿಕ್ಕಮಗಳೂರಿನ ಕಾಫಿ ಪ್ಲಾಂಟರು ಮತ್ತು ವಿಧಾನ ಪರಿಷತ್ತಿನ ಮಾಜಿ ಸದಸ್ಯರು ಶ್ರೀ ಎಂ ಎಲ್. ವಾಸುದೇವ ಮೂರ್ತಿಯವರು

'Kannada version of the Article—

"Is Beef possible in Madhuparka ?"

From "A Review of Beel in Ancient Indi"

Compiled by Syt J. Dalmiaji

ಮಧುಪರ್ಕದಲ್ಲಿ ಗೋಮಾಂಸ ಸಾಧ್ಯವೇ ?

[ಮುಂದುವರಿದುದು]

ಮನು–ಸ್ಮೃತಿ ತಂ ಪ್ರತೀತಂ ಸ್ವಧರ್ಮೇಣ ಬ್ರಹ್ಮಣಾಯಹರೇತ್ ಪಿತುಃ ।
33 ಶ್ಯಾಮಾಕಂ ತಲ್ಪ ಆಸೀನಮರ್ಹಯೇತ್ ಪ್ರಥಮೇ ಗವಾಂ ॥

ತನ್ನ ಕರ್ತವ್ಯವನ್ನು ನಿಷ್ಠೆಯಿಂದ ನೆರವೇರಿಸಿದ್ದಕ್ಕೆ ಪ್ರಶಂಸಿಸಲ್ಪಟ್ಟ ಪುತ್ರನು ತನ್ನ ಪೂರ್ವಭಾವಿ ಅಥವಾ ಏಕಂವಕಾರ್ಥಿಕ ತಂದೆಯಿಂದ ಪೂರ್ವದಲ್ಲಿ ಪವಿತ್ರ ದಾನಗಳನ್ನು ಪಡೆಯುವ ತನ್ನನ್ನು, ಹೂವಿನವಾಲೆಗಳಿಂದ ಅಲಂಕರಿಸಿದ ಅಂದವಾದ ಹಾಸಿಗೆಯ ಮೇಲೆ ಕೂರಿಸಿ, ಅತನ ಶೋಭನಕ್ಕೆ ಮುಂಚೆ ಅತನ ತಂದೆ ಮಧುಪರ್ಕ ವಿಧಿಯಂತೆ ಅತನಿಗೆ ಒಂದು ಹಸುವನ್ನು ಬಳುವಾಗಿ ಗೌರವಿಸಲಿ ["ಪುರಾತನ ಭಾರತದಲ್ಲಿ ಗೋಮಾಂಸ" ದಲ್ಲಿ ರಾಜಾ ರಾಜೇಂದ್ರಲಾಲ್‌ರಿಂದ ಭಾಷಾಂತರಿಸಲಾಗಿದೆ

Ban Cow slaughter

— From "Gandhiji on Cowprotection'—

The appeal of the lower order is all the more forcible because it is speechless — By every act of cruelty to our cattle we disown God and Hinduism

Nowhere in the world the condition of the cattle so poor as in India

Unfortunately of all places in the world, it is the sacred animal of the which has become cheapest for slaughter

Some experts contend that the cattle wealth is a burden on the land, fit only to be destroyed, I do not share this opinion.

Most of our villagers live with their animals often under the same roof ; both live together and both starve together

My ambition is no less than to see the principle of cow protection established throughout the world.

We have to save the Cow at all cost.

Silver Jubilee of 'Gorakshana'

H. H. Dwarka Jagadguruji has generously bestowed Rs. 100/– with His Blessings

ಕಾಮಧೇನು

(ಕವಿತೆ)

ನುಣ್ಣನೆಯ ಮೈಕಪ್ಪು
ಹೊಳಪು ಕಪಿಲೆ
ನಮ್ಮ ಮನೆ ಕಾಮಧೇನು
ನಮಗೆಲ್ಲ ನೀಡುವುದು
ಸವಿಜೇನ ತಾನು ॥ 1 ॥

ಬೆಟ್ಟದಾ ಸೊಪ್ಪು ಸಪ್ಪೆ
ಹೊಳ್ಕದಾ ಸಿಹಿನೀರು
ದಿನದಿನದ ಫಲಹಾರ
ವಿವೆ ನನಗೆ ಸಾಕು
ಹೆಚ್ಚಿನಾಸೆಯೆ ಇಲ್ಲ
ಹೆಚ್ಚೆಂಬ ಹರಿಸೆ ಇಲ್ಲ
ಬೆಚ್ಚನಾ ಕೊಟ್ಟಿಗೆಯೆ
ಇರಲೆನಗೆ ಮನೆಯು ॥ 2 ॥

ನೇವರಿಪ ಮೊಗವೆತ್ತಿ
ನೆಕ್ಕುವುದು ನಾಲಿಗೆ ಚಾಚಿ
ಮುಗ್ಧ ಜೀವಿ !
ಸಿಕ್ಕುವುದೆ ಇಂಥ ನಲಿವು ಒಲುವು
ಮನುಕುಲದೊಳೆಂದೂ ?! ॥ 3

ಕೆಚ್ಚಲಿಗೆ ಕೈಹಚ್ಚಿ
ನಿಲ್ಲುವುದು ಕಣ್ಮುಚ್ಚಿ
ಎಲ್ಲ ನೋವನು ಬಹಿಸಿ
ಧಾರೆಎರವುದು ಧಾರೆಧಾತೆಯಾಗಿ
ಅಮೃತಕು ಮಿಗಿಲೆನಿಪ

ನೊರೆ ಹಾಲ ! ॥ 4 ॥

ಇದು ನಮ್ಮ ಧೇನು
ಕಾಮಧೇನು
ನೀಡುವುದು ನಮಗೆಲ್ಲ
ಸವಿಜೇನು ॥ 5 ॥

— ಕಾವ್ಯನಾಮ : ಮಲೆನಾಡುತನಯ

○

ಜರ್ಮನಿಯ ಆನೆ

ಸ್ಟುಟ್‌ಗಾರ್ಟ್ (ಡಾಡ್)— 1910 ರಲ್ಲಿ ಒಂದು ಆಳವಾದ ಗುಹೆಯಲ್ಲಿ ಹಿಮಯುಗದ ಆನೆಯ ಅಸ್ಥಿ ಪಂಜರ ಒಂದು ದೊರಕಿತ್ತು ; ಇಷ್ಟರವರೆಗೆ ಈ 200000 ವರ್ಷಗಳ ಹಿಂದಿನ ಅಸ್ಥಿ ಪಂಜರವನ್ನು ಸಂಗ್ರಹಾಲಯವೊಂದಕ್ಕೆ ಕೊಟ್ಟಿದ್ದು ಈ ವಾಗ, ಅದು ದೊರಕಿದ ಸ್ಥಳದಲ್ಲಿಯೇ ಕಟ್ಟಲಾದ ಸ್ಮಾರಕವೊಂದರಲ್ಲಿ ಚಾರಿತ್ರಪೂರ್ವ ಮಾನವ ಸಂಗ್ರಹಾಲಯದಲ್ಲಿ ಅದನ್ನು ಇಡಲಾಗಿದೆ. ಸ್ಟಾರ್ಟ್‌ಗಾರ್ಟ್‌ನಲ್ಲಿ 1933 ರಲ್ಲಿ 250000 ವರ್ಷಕ್ಕಿಂತಲೂ ಹಿಂದಿನ ಮಾನವ ಅಸ್ಥಿ ಪಂಜರ ಒಂದು ದೊರಕಿ ವಿಶ್ವದಲ್ಲಿಡೆ ಜಿಜ್ಞಾಸೆಯನ್ನು ಕೆರಳಿಸಿತ್ತು ; ಅನಂತರ ಅಲ್ಲಿಯೇ ದೊರಕಿದ ಎಮ್ಮೆ, ನೀರಿಮ್ಮೆ, ಸಿಂಹ ಹಾಗೂ ಇತರ ಮೃಗಗಳ ಅಸ್ಥಿ ಪಂಜರಗಳೂ ಇದೇ ರೀತಿ ಆಸಕ್ತಿಯನ್ನುಂಟು ಮಾಡಿದ್ದವು ; ಇದಕ್ಕೆ ಕಾರಣ ಯೂರೋಪಿನಲ್ಲೆಲ್ಲೂ ಈ ಜಂತುಗಳ ನಿವೇಶನವು ನಿಂತು ಬಹುಕಾಲವಾಗಿವೆ [ಯೂ ಪಿ ಎಸ್

' ಗೋರಕ್ಷಣ ' ದ ಬೆಳ್ಳಿ ಹಬ್ಬ

ಗೋರಕ್ಷಣೆ, ಪ್ರಾಣಿದಯೆ, ಇತ್ಯಾದಿ ಪವಿತ್ರ ಧ್ಯೇಯಗಳ ಪ್ರಚಾರ ಪತ್ರಿಕೆಗಳು ರಾಷ್ಟ್ರದಲ್ಲಿ ಕೆಲವೇ ಇದ್ದು, ಧಾರ್ಮಿಕ ಪತ್ರಿಕೆಗಳು ಹೆಚ್ಚು ಕಾಲ ಬದುಕಿ ಬಾಳುವುದು ಅಸಾಧಾರಣವಾಗಿ ಇರುವಾಗ, " ಗೋರಕ್ಷಣ ' ವು ತನ್ನ ಬೆಳ್ಳಿ ಹಬ್ಬವನ್ನು ಬೇಗನೇ ಮತ್ತು ಯಶೋಚಿತವಾಗಿ ಆಚರಿಸುವ ಸಂದರ್ಭ ಒದಗಿರುವದು ಹರ್ಷದಾಯಕವಾಗಿದೆ. ಧರ್ಮಾಭಿಮಾನಿಗಳೂ ಗೋಮಾತೆ ಭಕ್ತರೂ, ಪ್ರಾಣಿದಯಾಪರರೂ ' ಗೋರಕ್ಷಣ " ದ ಬೆಳ್ಳಿ ಹಬ್ಬ ಆಚರಣೆಗೆ ಧನ ನೆರವು ಮತ್ತು ಸಂದೇಶಗಳನ್ನು ದಯಮಾಡಿಸಬೇಕೆಂದೂ, ಇದನ್ನು ಕೃತಜ್ಞತಾಪೂರ್ವಕ ಸ್ಮರಿಸಲಾಗುವುದೆಂದೂ ಸವಿನಯವಾಗಿ ತಿಳಿಸುತ್ತೇವೆ.

ಸಂಪಾದಕ, ಗೋರಕ್ಷಣ ಪತ್ರಿಕೆ
ಚಾಮರಾಜಪುರಂ, ಮೈಸೂರು 4

★

ದಯೆಯೇ ಧರ್ಮದ ಮೂಲವಯ್ಯ.
— ಜಗಜ್ಯೋತಿ ಬಸವೇಶ್ವರ

ಅಹಿಂಸೋ ಪರಮೋಧರ್ಮಃ
— ಜೈನಧರ್ಮದ ಮುಖ್ಯತತ್ವ

Animal sacrifices are forbidden and none of our rituals ever offer meat — Part I
Zarathustra Religion

Of all the sacred vows I am [the vow of] harmlessness, Ahims — Lord Krisnna

The meat of a cow is disease (mar), its milk is health (safa) its ghee is medicine (dava)
– Al-Ghazali

Not even to win swaraj will I renounce my principle of cow protection .... I will not be a party to cow slaughter
– Gandhiji

★

ವನ್ಯಜೀವಿಗಳನ್ನು ನೋಡಲು

ಜಯಪುರ— ವನ್ಯಜೀವಿಗಳನ್ನು ನೋಡಲು ಭಾರತಕ್ಕೆ ಬಂದಿರುವ 37 ಐರೋಪ್ಯ ಮತ್ತು 2 ಭಾರತ ಮಕ್ಕಳು ಸವಾಯ್ ಮಧೋಪುರದ ರಥಾಂಬೋರ್ ಅರಣ್ಯಕ್ಷೇತ್ರದಲ್ಲಿ ನೊಸಳೆ, ಚುಕ್ಕೆಜಿಂಕೆ, ಕಾಡುಹಂದಿ, ವಿವಿಧ ಪಾಂಬಾರ್‌ಗಳನ್ನು ನೋಡಿದರು ; ಹುಲಿಯು ಆಮೇಲೆ ಕಡವಾಗಿ ಕಾಣಿಸಿಕೊಂಡಿತು – ಈ ಭೇಟಿ ಕೊಟ್ಟಿರುವ ಮಕ್ಕಳು ಭಾರತದ " ಹುಲಿ ಪ್ರಾಜೆಕ್ಟ್ " ಗೆ 700000 ಪೌಂಡರಷ್ಟು ಶೇಖರಿಸಿ ಸಹಾಯ ಮಾಡಿರುವರು

★

ನೇಪಾಳ ರಾಜರ ಕಿರೀಟಧಾರಣೆ

ಖಟ್ಮಂಡು— ನೇಪಾಳ ರಾಜರ ಕಿರೀಟಧಾರಣೆ ಮಹೋತ್ಸವವು ತಾ ॥ 24 ರಂದು ಅತ್ಯಂತ ವೈಭವವಾಗಿ ನೆರವೇರಿತು.

ಸಿಂಹ ಹುಲಿಗಳೊಡನೆ ಸರಸ

ಅಮೇರಿಕಾದ ಜೂಜಾಟದ ರಾಜಧಾನಿಯಲ್ಲಿ ಸಿಗ್‌ಫ್ರೈಡ್ ಫಿಶ್‌ಬೇಚರ್ ಮತ್ತು ರಾಯ್ ಹಾರ್ಬ ಎಂಬುವರು ಸಾಕಿಕೊಂಡಿರುವ 5 ದೊಡ್ಡ ವನ್ಯಪ್ರಾಣಿಗಳಲ್ಲಿ 5 ವರ್ಷದ 650 ಪೌಂಡು ತೂಕದ ಒಂದು ಸಿಂಹ ಇವೆ ; ವಿಕ್ಟರಿ, ಸಾರಾ ಎಂಬ ಅರರೂಪ ಚಿರತೆ, ರಾಡ್ಜಾ ಎಂಬ ಬಂಗಾಲಿ ಹುಲಿ, ಸಾಬು ಎಂಬ ಕಪ್ಪು ಚಿರತೆ, ಸಾಷಾ ಎಂಬ ಆಫ್ರಿಕಾ ಚಿರತೆ. ಇವರಲ್ಲಿ ನಾಯಿಗಳಿಲ್ಲವಾದರೂ, " ನಾಯಿಗಳಿವೆ ಎಚ್ಚರಿಕೆ ' ಎಂದೂ ಬೋರ್ಡು ಹಾಕಿದ್ದಾರೆ. ಇವರಿಬ್ಬರೂ ಮಂತ್ರವಾದಿಗಳಾಗಿದ್ದು ಸಭೆಗಳಲ್ಲಿ ವೇದಿಕೆ ಮೇಲೆ ಭಾರಿ ವನ್ಯಪ್ರಾಣಿಗಳನ್ನು ಬರಿಸುತ್ತಾರೆ ಮತ್ತು ಮಾಯವಾಗಿಸುತ್ತಾರೆ. ಇವರು ಈಜುವ ಕೊಳದಲ್ಲಿ ತಮ್ಮ ಪ್ರಾಣಿಗಳೊಡನೆ ಈಜುತ್ತಾರೆ ; ಹಲವು ಸಾರಿ ಅವುಗಳು ಸರಸವಾಡುತ್ತಾ ಇವರನ್ನು ಕಚ್ಚಿ, ಗಾಯಗೊಳಿಸಿವೆ; ಇವರು ಎಂ ಜಿ ಎಂ. ರ " ದೇವರ ಸ್ತುತಿಗಾನ ಹೋಲೀವುಡ್‌ನಲ್ಲಿ, ಮಂತ್ರವಾದಿಗಳ ಆಟ ನಡೆಸುತ್ತಾರೆ

ಪ್ರಾಣಿಧಾಮಗಳು

ಕಲ್ಕತ್ತ — ದೇಶದಲ್ಲಿ 131 ಪ್ರಾಣಿಧಾಮುಗಳನ್ನು ಅಭಿವೃದ್ಧಿಗೊಳಿಸುವ ಕಾರ್ಯ ತೆಗೆದುಕೊಳ್ಳಲಾಗಿದೆಯೆಂದೂ, ಅರರೂಪ ಮತ್ತು ಅಶ್ಚರ್ಯಕರವಾದ ಪ್ರಾಣಿಗಳರಕ್ಷಣೆ ಕೈಗೊಳ್ಳಲಾಗಿದೆಯೆಂದೂ ಪ್ರಕಟವಾಗಿದೆ.

ಹಕ್ಕಿಪಕ್ಷಿ ಬದುಕಿದವು

ಮೈಸೂರು— ಈಚೆಗೆ ಇಲ್ಲಿಗೆ ಮೂರು ವಿಧದ ವನ್ಯಪಕ್ಷಿಗಳನ್ನು ಹಕ್ಕಿಪಿಕ್ಕಿ ಜನಾಂಗದವರು ತಂದು ಇಲ್ಲಿಯ ಮೃಗಾಲಯ ನ್ಯಾಸಾರಿಗಳಿಗೆ ಮಾರಿದುದು ಅರಣ್ಯಾಧಿಕಾರಿಗಳಿಗೆ ಗೊತ್ತಾಗಿ ಅವರು ಮೃಗಾಲಯದ ಮೃಗಾಲಕಟ್ಟೆ ಮೇಲೆ ದಾಳಿ ನಡೆಸಿ, ಸುಮಾರು 300 ಹಕ್ಕಿಗಳನ್ನು ವಶಪಡಿಸಿಕೊಂಡು, ಅವುಗಳನ್ನು ರಂಗನತಿಟ್ಟು ಪಕ್ಷಿಧಾಮ ಮತ್ತು ಬಂಡೀಪುರದ ನ್ಯಾಷನಲ್ ಪಾರ್ಕ್‌ನಲ್ಲಿ ಬಿಟ್ಟರು.

● ಸಾಸನ್ (ಗುಜರಾತ್)– ಈಗ ಗಿರ್ ಸಿಂಹಗಳು, 53 ಗಂಡು, 77 ಹೆಣ್ಣು 50 ಮರಿಗಳಿವೆ

Silver Jubilee of Gorakshana

When Journals devoted to the pious and noble cause of cow-protection kindness to animals, ahimsa etc, are very few and dharmic papres are short-lived, it is rejoicing that the Gorakshana will be celebrang its uniqe Silver jubilee early and in a befitting manner Donations and Messages from philanthropic, Gomata-interested humanitarian persons are fervently solicited, and this act of kindness will be gratefully acknowledged and ever remembered

Editor ' Gorakshana " Chamarajapuam, Mysore

ವುಡ್‌ಲಾಂಡ್ 28 2 75 ರಿಂದ
ದಾರಿ ತಪ್ಪಿದ ಮಗ
ಅಪೆರಾ 28 2 75 ರಿಂದ
ದಾವತ್

Edited Printed and Published by Dharmapracharanirata M S. Krishna Rao (Proprietor) at the Sarvodaya Press, Chamarajapuram Mysore